ಅಂಗಡಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅಂಗಡಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬಹುದು. ಅಲ್ಲದೆ, ಒಂದೇ ನ್ಯಾಯಬೆಲೆ ಅಂಗಡಿಯಲ್ಲಿ 500-600ಕ್ಕಿಂತಲೂ ಹೆಚ್ಚು ಪಡಿತರದಾರರಿದ್ದರೆ ಬೇರೆ ನ್ಯಾಯಬೆಲೆ ಅಂಗಡಿ ಪ್ರಾರಂಭಿಸಬಹುದಾಗಿದೆ. ಹಿಂದೆ ಮುನ್ನೂರು ಪಡಿತರದಾರರಿಗೆ ಒಂದು ನ್ಯಾಯಬೆಲೆ ಅಂಗಡಿ ಇತ್ತು. ಈಗ ಜನರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಸಣ್ಣಪಟ್ಟ ಹ್ಯಾಮ್ಲೆಟ್‌ಗಳು ನ್ಯಾಯಬೆಲೆ ಅಂಗಡಿಯಿಂದ ದೂರವಿದ್ದರೂ ಕೂಡ bifurcation ಮಾಡುವುದಕ್ಕೆ ಪಿ.ಡಿ.ಎಸ್. ಆಕ್ಟ್‌ಗೆ ಅಮೆಂಡ್‌ಮೆಂಟ್ ತರುತ್ತಿದ್ದೇವೆ. ಜನರಿಗೆ ಅನುಕೂಲವಾಗುವ ದಿಸೆಯಲ್ಲಿ ಸರ್ಕಾರ ಖಂಡಿತವಾಗಿಯೂ ಸಹಾಯ ಮಾಡುತ್ತದೆ.

ಶ್ರೀ ಎನ್. ಸಂಪಂಗಿ :- ಇನ್ನು ಮುಂದೆ ನ್ಯಾಯಬೆಲೆ ಅಂಗಡಿಗಳನ್ನು ಕೊಡುವಾಗ ಆದ್ಯತೆ ಮೇಲೆ ಮೊದಲು ಸ್ತ್ರೀ ಶಕ್ತಿ ಸಂಘಗಳಿಗೆ ಮಹಿಸಿಕೊಡಲಾಗುವುದೆಂದು ಸರ್ಕಾರ ಹೇಳಿದೆ. ಒಂದು ವೇಳೆ ಕೆಲವು ಕಡೆಗಳಲ್ಲಿ ಸ್ತ್ರಿಶಕ್ತಿ ಸಂಘಗಳು ಇಲ್ಲವೆಂದರೆ ಏನು ಮಾಡುತ್ತೀರಿ?

ಶ್ರೀ ರಾಮಲಿಂಗರೆಡ್ಡಿ :- ಹಿಂದೆ ನ್ಯಾಯಬೆಲೆ ಅಂಗಡಿಗಳನ್ನು ಕೊಡುವಾಗ ಮೊದಲ ಆದ್ಯತೆ ಫುಡ್ ಕಾರ್ಪೊರೇಷನ್‌ಗೆ ಇರುತ್ತಿತ್ತು. ಅನಂತರ, ಕೋ-ಆಪರೇಟೀವ್ ಸೊಸೈಟಿಗಳು, ಸಂಘ-ಸಂಸ್ಥೆಗಳು, ಇಂಡಿವಿಜ್ಯುಯಲ್ಸ್‌ಗೆ, ಅದರಲ್ಲಿ ಎಸ್‌ಸಿ:ಎಸ್‌ಟಿ ಗ್ರಾಜ್ಯುಯೇಟ್ಸ್, ಹ್ಯಾಂಡಿಕ್ಯಾಪ್ಡ್ ಮತ್ತು ಎಕ್ಸ್‌ಸರ್ವೀಸ್‌ಮೆನ್‌ಗೆ ಕೊಡಲಾಗುತ್ತಿತ್ತು. ಈಗ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ತ್ರೀಶಕ್ತಿ ಸಂಘಗಳಿಗೆ ಮೊದಲ ಆದ್ಯತೆ ಮೇಲೆ ನ್ಯಾಯಬೆಲೆ ಅಂಗಡಿಗಳನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಿಕೊಡಲಾಗುವುದೆಂದು ಹೇಳಿದ್ದರೂ, ಒಂದು ವೇಳೆ ಅವರು ಇಲ್ಲದಿದ್ದರೆ ಆದ್ಯತೆ ಪ್ರಕಾರ ಬೇರೆಯವರಿಗೆ ಕೊಡುತ್ತೇವೆ.

ಅಧ್ಯಕ್ಷರು :- ಇಲ್ಲಿಗೆ ಪ್ರಶ್ನೋತ್ತರ ಮುಕ್ತಾಯವಾಯಿತು.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ 29.3.2003ರಂದು ಸದನದಲ್ಲಿ ಉತ್ತರಿಸುವ 16 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 112 ಪ್ರಶ್ನೆಗಳ ಪೈಕಿ 99 ಉತ್ತರಗಳನ್ನು ಮಂಡಿಸುತ್ತಿದ್ದೇನೆ. *(ಅನುಬಂಧ-III)*

ಅಧ್ಯಕ್ಷರು :- ಮಂಡಿಸಲಾಯಿತು.

(12) ಗಮನ ಸೆಳೆಯುವ ಸೂಚನೆಗಳು

(1) ವಿಷಯ: ರಾಜ್ಯದಲ್ಲಿ ವರ್ಜಿನಿಯಾ ಹೊಗೆಸೊಪ್ಪು ಬೆಳೆಗಾರರು ಅನುಭವಿಸುತ್ತಿರುವ ತೊಂದರೆ ಬಗ್ಗೆ.

ಶ್ರೀ ಎ. ಮಂಜು (ಅರಕಲಗೂಡು) ಶ್ರೀ ಎ. ಪಾಪಣ್ಣ (ಹುಣಸೂರು) ಮತ್ತು ಶ್ರೀ ಹೆಚ್.ಪಿ. ಬಸವರಾಜು (ಪಿರಿಯಾಪಟ್ಟಣ) :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವರ್ಜಿನಿಯಾ ಹೊಗೆಸೊಪ್ಪು ಬೆಳೆಗಾರರು ಅನುಭವಿಸುತ್ತಿರುವ ತೊಂದರೆ ಕುರಿತಂತೆ ನಾನು ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :- ರಾಜ್ಯದಲ್ಲಿ ಬೆಳೆಯುತ್ತಿರುವ ವರ್ಜೀನಿಯ ತಂಬಾಕು ಬೆಳೆಗಾರರ ಹಿತ ಕಾಪಾಡುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1) ನನ್ನ ಅಧ್ಯಕ್ಷತೆಯಲ್ಲಿ 30-10-2002ರಂದು ವ್ಯಾಪಾರಸ್ಥರು ಮತ್ತು ಮಂಡಳಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ರಾಜ್ಯದಲ್ಲಿ ಉತ್ಪಾದಿಸಿರುವ ಎಲ್ಲಾ ತಂಬಾಕನ್ನು ಮಾರಾಟವಾಗುವಂತೆ ಕ್ರಮ ಕೈಗೊಳ್ಳಲಾಗಿತ್ತು. ಹಾಗೂ 2002 ಬೆಳೆ ಸಾಲಿನಲ್ಲಿ ಸುಮಾರು 63.2 ಮಿಲಿಯನ್ ಕೆ.ಜಿ. ತಂಬಾಕು ಸರಾಸರಿ ಕೆ.ಜಿ. ಒಂದಕ್ಕೆ 43.61 ಬೆಲೆಗೆ ಮಾರಾಟವಾಗಿರುತ್ತದೆ. ಮಾರಾಟವಾಗದೆ ತಂಬಾಕು ಬಾಕಿ ಉಳಿದಿರುವುದಿಲ್ಲ.

2) ರಾಜ್ಯದಲ್ಲಿ 26,700 ಲೈಸೆನ್ಸ್ ಹೊಂದಿರುವ ತಂಬಾಕು ಬ್ಯಾರನ್‌ಗಳಿದ್ದು, ಲೈಸೆನ್ಸ್ ಇಲ್ಲದೆ 27,000 ಬ್ಯಾರನ್‌ಗಳಿರುತ್ತದೆ. ಈ ತಾರತಮ್ಯವನ್ನು ನಿವಾರಣೆ ಮಾಡಲು ಎಲ್ಲಾ ಬ್ಯಾರನ್‌ಗಳಿಗೂ ಲೈಸೆನ್ಸ್ ಕೊಡುವಂತೆ ತಂಬಾಕು ಮಂಡಳಿ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.

3) ತಂಬಾಕು ಮಂಡಳಿಯಲ್ಲಿರುವ ಒಟ್ಟು ಸದಸ್ಯರ ಪೈಕಿ 23 ಸದಸ್ಯರ ಪೈಕಿ ಆಂಧ್ರ ಪ್ರದೇಶದವರಿದ್ದು, ಕರ್ನಾಟಕದಿಂದ ಕೇವಲ 5 ಮಂದಿ ಸದಸ್ಯರಿರುತ್ತಾರೆ. ಹಾಗೂ ಕೃಷಿ ವಿಶ್ವವಿದ್ಯಾಲಯದಿಂದ ನೇಮಕಗೊಂಡಿರುವ ಸದಸ್ಯರು, ರೈತರ ಹಿತ ಕಾಪಾಡುವಲ್ಲಿ ವಿಫಲವಾಗಿದ್ದು, ಈಗಾಗಲೇ ಅವರ ಸೇವೆಯನ್ನು ಹಿಂದಕ್ಕೆ ಪಡೆಯಲಾಗಿದೆ. ಹಾಗೂ ಮಂಡಳಿಯಲ್ಲಿ ತೆಗೆದುಕೊಳ್ಳುವ ತೀರ್ಮಾನಗಳು ರಾಜ್ಯದ ಹಿತಕ್ಕೆ ಧಕ್ಕೆಯಾಗಿರುತ್ತದೆ.

4) 2003ನೇ ಬೆಳೆ ವರ್ಷಕ್ಕೆ ಉತ್ಪಾದನಾ ಗುರಿ ನಿಗದಿಪಡಿಸುವ ಉದ್ದೇಶದಿಂದ ದಿನಾಂಕ: 18-3-2003ರಂದು ತಂಬಾಕು ಮಂಡಳಿಯ ಅಧಿಕಾರಿಗಳು, ವ್ಯಾಪಾರಸ್ಥರು ತಂಬಾಕು ಬೆಳೆಯುವ ಪ್ರದೇಶದ ಶಾಸಕರುಗಳನ್ನೊಳಗೊಂಡ ಸಭೆಯೊಂದನ್ನು ಕರೆದು ಉತ್ಪಾದನಾ ಗುರಿಯನ್ನು 80 ಮಿಲಿಯನ್‌ಗೆ ನಿಗದಿಪಡಿಸುವಂತೆ ಒತ್ತಾಯಿಸಲಾಗಿದೆ.

5) ತಂಬಾಕು ಮಂಡಳಿಯ ಉತ್ಪಾದನಾ ಗುರಿ ಸಮಿತಿಯ ಸಭೆಯನ್ನು ಬೆಂಗಳೂರಿನಲ್ಲೇ ಕರೆಯುವಂತೆ ಹಾಗೂ ತಂಬಾಕು ಬೆಳೆಯುವ ಪ್ರದೇಶದ ಶಾಸಕರುಗಳನ್ನು ಸಭೆಗೆ ಆಹ್ವಾನಿಸುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಹಾಗೂ ತಂಬಾಕು ಮಂಡಳಿಗೆ ಪತ್ರವನ್ನು ಬರೆದು ಒತ್ತಾಯಿಸಲಾಗಿದೆ. ಒಂದು ಪಕ್ಷ ಈ ಸಭೆಯನ್ನು ಕರ್ನಾಟಕದಲ್ಲಿ ಕರೆಯದೇ ಹಾಗೂ ತಂಬಾಕು ಬೆಳೆಯುವ ಪ್ರದೇಶದ ಶಾಸಕರುಗಳನ್ನು ಕರೆದು ಆಹ್ವಾನಿಸದಿದ್ದಲ್ಲಿ ರಾಜ್ಯದ ತಂಬಾಕು ಬೆಳೆಗಾರರ ಹಿತಕ್ಕೆ ಧಕ್ಕೆಯಾಗುವ ಸಂಭವವಿರುತ್ತದೆ.

6) ಕಳೆದ ವರ್ಷಗಳಲ್ಲಿ ರೈತರಿಗೆ ವಿಧಿಸಿರುವ ಹೆಚ್ಚುವರಿ ಶುಲ್ಕ ಮತ್ತು ದಂಡವನ್ನು ವಾಪಸ್ಸು ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಈಗಾಗಲೇ ಒತ್ತಡ ತರಲಾಗಿದೆ.

7) ರೈತರ ವಿರುದ್ಧ ಹೂಡಿರುವ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಕೇಂದ್ರ ಸರ್ಕಾರದ ಮತ್ತು ಮಂಡಳಿಯ ಮೇಲೆ ಒತ್ತಡ ತರಲಾಗಿದೆ.

8) ಹೆಚ್ಚುವರಿ ಮಾರುಕಟ್ಟೆಗಳನ್ನು ತೆರೆಯುವಂತೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಒತ್ತಡ ತರಲಾಗಿದೆ.

9) ರಾಜ್ಯದ ರೈತರ ಹಿತಕ್ಕೆ ಧಕ್ಕೆಯಾಗುತ್ತಿರುವುದರಿಂದ, ಮಂಡಳಿಯನ್ನು ಪುನರ್ ರಚಿಸುವಂತೆ ಅಥವಾ ರದ್ದುಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.

10) ರಾಜ್ಯ ಸರ್ಕಾರವು ಈಗಾಗಲೇ ಪರಬೀರ್ ಸೇನ್ ಗುಪ್ತಾರವರು ಸಲ್ಲಿಸಿರುವ ವರದಿಯನ್ನು ಜಾರಿಗೊಳಿಸುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.

ಈ ಪ್ರಕಾರವಾಗಿ ರಾಜ್ಯ ಸರ್ಕಾರವು ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ನಿವಾರಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

†ಶ್ರೀ ಎ. ಮಂಜು (ಅರಕಲಗೂಡು) :- ಮಾನ್ಯ ಚೇರ್ಮನ್‌ರವರೆ, ಸರ್ಕಾರ ಯಾವ ರೀತಿ ವರ್ಜಿನಿಯಾ ಹೊಗೆಸೊಪ್ಪ, ಬೆಳೆಗಾರರ ಪರವಾಗಿ ಕ್ರಮ ಕೈಗೊಂಡಿದೆ ಎಂಬುದನ್ನು ಮಾನ್ಯ ಕೃಷಿ ಸಚಿವರು ವರದಿಯನ್ನು ಓದಿದ್ದಾರೆ. ಬಹುಶಃ ಅವರು ಓದಿರತಕ್ಕಂಥ ವರದಿ ನಿಜವಾಗಿಯೂ ರೈತರ ಪರವಾಗಿರುವುದಕ್ಕೆ ನಾನು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ತಂಬಾಕು ಮಂಡಳಿ 1983ರಲ್ಲಿ ಸ್ಥಾಪನೆಯಾಯಿತು. ಮೊದಲನೆಯದಾಗಿ 1984ರಲ್ಲಿ ಆಕ್ಷನ್ ಪ್ಲಾಟ್‌ಫಾರ್ಮ್ ಮುಖಾಂತರ ತಂಬಾಕನ್ನು ಮಾರಾಟ ಮಾಡಲು ಪ್ರಾರಂಭಿಸಲಾಯಿತು. ಆಗ ಸುಮಾರು 16 ಮಿಲಿಯನ್ ಕೆ.ಜಿ.ಗಳಷ್ಟು ಹೊಗೆಸೊಪ್ಪನ್ನು ರಾಜ್ಯದ ರೈತರು ಬೆಳೆಯುತ್ತಿದ್ದ ಕಾಲ. ಇವೊತ್ತು 2002-03ನೇ ಸಾಲಿನಲ್ಲಿ ಸುಮಾರು 67 ಮಿಲಿಯನ್ ಕೆ.ಜಿ.ಗಳಷ್ಟು ದಾಖಲೆಯ ಹೊಗೆಸೊಪ್ಪನ್ನು ರಾಜ್ಯದ ರೈತರು ಬೆಳೆದಿದ್ದಾರೆಂಬುದನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ಇವೊತ್ತು ಕರ್ನಾಟಕದಲ್ಲಿ ಎಂಟು ಪ್ಲಾಟ್‌ಫಾರ್ಮ್‌ಗಳಿದ್ದು, ಅವು ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ರಾಮನಾಥಪುರ ಮತ್ತು ಶಿವಮೊಗ್ಗದಲ್ಲಿದೆ. ಇಲ್ಲಿ ಮೊದಲು ಕ್ರಾಪ್ ಸೈಜನ್ನು ಫಿಕ್ಸ್ ಮಾಡಿ, ಅಂದರೆ, 16 ಮಿಲಿಯನ್ ಕೆ.ಜಿ.ಗೆ ಒಳಪಟ್ಟಂತೆ ಪ್ಲಾಪ್‌ಫಾರ್ಮನ್ನು ತಂಬಾಕು ಮಂಡಳಿ ಒಂದು ದಿನ ತೀರ್ಮಾನ ಮಾಡಿತ್ತು. ಇವೊತ್ತು 60 ಮಿಲಿಯನ್ ಕೆ.ಜಿ.ಗಳಷ್ಟು ಹೊಗೆಸೊಪ್ಪ ಬೆಳೆಯುತ್ತಿರುವ ಸಂದರ್ಭದಲ್ಲಿ ಮಂಡಳಿಯವರು ಈ ಕುರಿತು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕ್ರಮ ಏಕೆ ತೆಗೆದುಕೊಂಡಿಲ್ಲವೆಂದರೆ, ಮಂಡಳಿ ಇರುವುದು ಗುಂಟೂರಿನಲ್ಲಿ! ಹೊಗೆಸೊಪ್ಪು ಮಂಡಳಿ ಗುಂಟೂರಿನಲ್ಲಿರುವಾಗ ಮಂಡಳಿಯ ಸದಸ್ಯರಾಗಿರುವವರು ಶೇಕಡ 90ರಷ್ಟು ಮಂದಿ ಆಂಧ್ರಪ್ರದೇಶದ ಡೈರೆಕ್ಟರ್ ಆಗಿದ್ದು, ಕರ್ನಾಟಕದಿಂದ ನಾಮಿನೇಶನ್ ಮುಖಾಂತರ ಹೋಗಿರುವವರು ಮೂವರು ಮಾತ್ರ. ಆ ಪೈಕಿ ಒಬ್ಬರು ಎಂ.ಪಿ., ಎರಡನೆಯವರು, ರಾಜ್ಯ ಸರ್ಕಾರದ ಕೃಷಿ ಇಲಾಖಾ ಆಯುಕ್ತರು, ಉಳಿದವರು ಮಂಡಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವವರು ಆಂಧ್ರಪ್ರದೇಶದ ಎಂ.ಪಿ.ಗಳು ಮತ್ತು ಅಲ್ಲಿನ ಪ್ರತಿನಿಧಿಗಳು ಮಾತ್ರ. ಇದನ್ನು ಈ ಸಂದರ್ಭದಲ್ಲಿ ನಾನು ಏಕೆ ಹೇಳಬೇಕಾಯಿತೆಂದರೆ, ಇದುವರೆವಿಗೂ ಕರ್ನಾಟಕ ರಾಜ್ಯದ ರೈತರ ಪರವಾಗಿ ನಮ್ಮ ಯಾವ ಎಂ.ಪಿ.ಯಾಗಲಿ ಅಥವಾ ಚುನಾಯಿತ ಪ್ರತಿನಿಧಿಗಳಾಗಲಿ ಯಾರೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿಲ್ಲ. ಗುಂಟೂರಿನಲ್ಲಿರುವ ಹೊಗೆಸೊಪ್ಪ ಮಂಡಳಿಯನ್ನು ಅಲ್ಲಿನ ಮುಖ್ಯಮಂತ್ರಿಗಳಾಗಿರುವ ಚಂದ್ರಬಾಬು ನಾಯ್ಡುರವರು ಅಲ್ಲಿನ ರೈತರ ಸಲುವಾಗಿ ಯಾವ ರೀತಿ ಉಪಯೋಗಿಸಿಕೊಳ್ಳುತ್ತಿದ್ದಾರೆಂಬುದನ್ನು ನೋಡಿದಾಗ ನಮಗೆ ಬಹಳ ದುಃಖವಾಗುತ್ತದೆ. ಒಬ್ಬರು ಸರ್ಕಾರವನ್ನು ಹಿಡಿತದಲ್ಲಿಟ್ಟುಕೊಂಡು ನಮ್ಮ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಚುನಾಯಿತ ಪ್ರತಿನಿಧಿಗಳಾಗಿರುವ ಎಂ.ಪಿ.ಗಳು ವಿಫಲರಾಗಿದ್ದಾರೆಂದು ಹೇಳಲು ನಾನು ಇಚ್ಛಿಪಡುತ್ತಿದ್ದೇನೆ. ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಸದನದಲ್ಲಿರುವುದರಿಂದ ಅವರಿಗೆ ಮನವಿ ಮಾಡಿಕೊಳ್ಳುತ್ತಿರುವುದೇನೆಂದರೆ, ರಾಜ್ಯದಿಂದ ಚುನಾಯಿತ ಪ್ರತಿನಿಧಿಗಳಾಗಿ ಹೋದಂಥ ವೆಂಕಯ್ಯನಾಯ್ಡು, ಅನಂತ್‌ಕುಮಾರ್ ಮತ್ತು ಪುಟ್ಟಸ್ವಾಮಿಗೌಡರು,.....ಇಲ್ಲಿ ಪಾರ್ಟಿ ಪರ, ವಿರೋಧವೆಂದು ಮಾಡಕೂಡದು. ಚುನಾವಣೆಯಲ್ಲಿ ನಾನು ಗೆಲ್ಲಿಸಿದಂಥ ಒಬ್ಬ ಪಾರ್ಲಿಮೆಂಟ್

ಸದಸ್ಯರು ಬೋರ್ಡ್‌ನ ಸದಸ್ಯರಾಗಿದ್ದರು. ಅವರು ಸದಸ್ಯರಾದ ನಂತರ ನಮ್ಮ ರಾಜ್ಯದ ರೈತರ ಹಿತಾಸಕ್ತಿ ಕಾಪಾಡಬೇಕು. ಆದಕಾರಣ, ಜಗದೀಶ್ ಶೆಟ್ಟರ್‌ರವರು ಈ ಕೂಡಲೇ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳೊಂದಿಗೆ ಮಾತನಾಡುವ ಮೂಲಕ ರಾಜ್ಯಕ್ಕಾಗಿರುವ ಅನ್ಯಾಯವನ್ನು ಗಮನಕ್ಕೆ ತಂದು, ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಜೊತೆಗೆ ಸಚಿವರಾದ ತಾವು ಏನು ಉತ್ತರ ಹೇಳಿದ್ದೀರಿ, ಇದರಿಂದ ರಾಜ್ಯದ ರೈತರಿಗಾಗಿರುವ ಅನ್ಯಾಯವನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲ. ಇವೊತ್ತು ಸುಮಾರು 49,000 ರೈತರುಗಳಿಗೆ ಅನ್ಯಾಯವಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ 19 ಸಾವಿರ ಮಂದಿ registered growers ಮತ್ತು 17 ಸಾವಿರ unregistered growers ಇದ್ದಾರೆ. 17 ಸಾವಿರ ಜನರಲ್ಲಿ 1995ನೇ ಇಸವಿಯಿಂದ ಇಲ್ಲಿಯವರೆಗೆ ರಾಜ್ಯದ ಒಬ್ಬ ರೈತನಿಗೂ ಬೋರ್ಡ್‌ನವರು ಲೈಸೆನ್ಸ್ ಕೊಟ್ಟಿಲ್ಲ. ಏತಕ್ಕೆ ಕೊಟ್ಟಿಲ್ಲ ಅಂದರೆ, ಅವರಿಂದ 15 ಪರ್ಸೆಂಟ್ ಹಣದಂತೆ ಒಂದು ವರ್ಷಕ್ಕೆ 199 ಕೋಟಿ ರೂಪಾಯಿಗಳಷ್ಟು ಹಣವನ್ನು ಬೋರ್ಡ್‌ನವರು ಇವತ್ತು ಕಲೆಕ್ಟ್ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಅನ್ಯಾಯವಾಗಿದೆ. ರೈತರಿಗೆ ಅನ್ಯಾಯವಾಗಿದೆ ಎಂದು ನಾನು, ಮಾನ್ಯ ಪಾಪಣ್ಣನವರು ಮತ್ತು ಮಾನ್ಯ ಬಸವರಾಜ್‌ರವರು ಆ ಬೋರ್ಡ್‌ನ ವಿರುದ್ಧವಾಗಿ ಪಬ್ಲಿಕ್ ಲಿಟಿಗೇಷನ್‌ವೊಂದನ್ನು ಹೈಕೋರ್ಟ್‌ನಲ್ಲಿ ಹಾಕಿದ್ದೆವು. ಈ ನಿಟ್ಟಿನಲ್ಲಿ ಸರ್ಕಾರ ಕೂಡ ನಮ್ಮ ಜೊತೆಗೆ ಸ್ಪಂದಿಸಿತು, ಆ ಸಂಬಂಧವಾಗಿ ಒಂದು ಪರ್ಸೆಂಟ್ ಅನ್ನು ಕಲೆಕ್ಟ್ ಮಾಡಿ, ರೈತರು ಬೆಳೆದಂತಹ ಹೊಗೆಸೊಪ್ಪನ್ನು ಕೊಳ್ಳಬೇಕೆಂದು ಉಚ್ಚ ನ್ಯಾಯಾಲಯ ತೀರ್ಮಾನಿಸಿತು. ಆ ತೀರ್ಮಾನ ತೆಗೆದುಕೊಂಡಂತಹ ಸಂದರ್ಭದಲ್ಲಿ, ಮಾನ್ಯ ಪ್ರಧಾನ ಮಂತ್ರಿಯವರ ಮುಖಾಂತರ ಮಾನ್ಯ ಚಂದ್ರಬಾಬು ನಾಯ್ಡುರವರು ಒತ್ತಡ ತಂದಿದ್ದರಿಂದಾಗಿ Solicitor General ಆದ ಶ್ರೀಯುತ ಸೊರಾಜ್ಜಿಯವರು ಅಲ್ಲಿಂದ ಈ ಉಚ್ಚ ನ್ಯಾಯಾಲಯಕ್ಕೆ ಬಂದು, ರಾಜ್ಯದ ಹಿತ ಕಾಪಾಡುವ ಸಲುವಾಗಿ ನಾನು ರೈತರ ಪರವಾಗಿ ಸಲ್ಲಿಸಿದ್ದ ಪಬ್ಲಿಕ್ ಲಿಟಿಗೇಷನ್ ವಿರುದ್ಧವಾಗಿ ಇಲ್ಲಿ ವಾದವನ್ನು ಮಾಡಿ ಎರಡು ಪ್ಲಸ್ ಎರಡು ರೂಪಾಯಿ ಚಾರ್ಜನ್ನು ಕಟ್ಟಲೇಬೇಕು ಅಂತೇಳಿ ಆರ್ಡರ್ ಮಾಡಿಸಿ ತೆಗೆದುಕೊಂಡು ಹೋದರು. ಇವತ್ತು ರಾಜ್ಯದ ರೈತರ ಎರಡೂವರೆ ಕೋಟಿ ರೂಪಾಯಿಗಳ ಹಣ ಉಚ್ಚ ನ್ಯಾಯಾಲಯದಲ್ಲಿ ಇದೆ. ಇದು ಆಗಲೇ ಸುಪ್ರೀಂಕೋರ್ಟ್‌ನಲ್ಲಿದೆ. ನಮ್ಮ ರಾಜ್ಯದಲ್ಲಿ ಬೆಳೆದಂತಹ ಹೊಗೆಸೊಪ್ಪ ಅತಿ ಉತ್ತಮವಾದದ್ದಾಗಿದ್ದು ಶೇಕಡ 90 ಪರ್ಸೆಂಟ್ ಎಕ್ಸ್‌ಪೋರ್ಟ್ ಆಗುತ್ತಿದೆ. ಹತ್ತು ಪರ್ಸೆಂಟ್ ಮಾತ್ರ ಡೊಮೆಸ್ಟಿಕ್‌ಗೆ ಯೂಸ್ ಆಗುತ್ತಿದೆ. ಇದರಿಂದ ಕೇಂದ್ರ ಸರ್ಕಾರಕ್ಕೆ 85 ಕೋಟಿ ರೂಪಾಯಿಗಳ foreign exchange ಬರುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ರೈತರಿಂದ 15 ಪರ್ಸೆಂಟ್ ಅನ್ನು ಕಲೆಕ್ಟ್ ಮಾಡುವ ಮೂಲಕ ಬೋರ್ಡ್ ರೈತರಿಗೆ ಅನ್ಯಾಯ ಮಾಡಿದೆ. ಜೊತೆಗೆ ನಮಗೆ ಕಳೆದ ಬಾರಿ 63 ಸಹಸ್ರ ಕೋಟಾವನ್ನು ಕೊಟ್ಟಿದ್ದರು. 1948ರಿಂದ ಇಲ್ಲಿಯವರೆಗೆ ನಾವು ಎಷ್ಟು ಪ್ರಮಾಣದಲ್ಲಿ ಹೊಗೆಸೊಪ್ಪನ್ನು ಬೆಳೆದಿದ್ದೇವೋ. ಅಷ್ಟನ್ನೂ ಕೂಡ ಬೋರ್ಡ್‌ನ ಮುಖಾಂತರ ಮಾರಾಟ ಮಾಡಲಾಗಿದೆ. ನಮ್ಮ ರಾಜ್ಯದ ರೈತರಾಗಲೀ ಅಥವಾ ಚುನಾಯಿತ ಪ್ರತಿನಿಧಿಗಳಾಗಲೀ ಅಥವಾ ಇನ್ನೊಬ್ಬರಿಗಾಗಲೀ ನಾವು ಬೆಳೆದ ಹೊಗೆಸೊಪ್ಪನ್ನು ಮಂಡಳಿ ಕೊಳ್ಳಲಿಲ್ಲ ಎಂದು ನಾವೇನೂ ಹೇಳಿಲ್ಲ. ತಾವು ಏನಾದರೂ ಇದರ ಬಗ್ಗೆ ಸೀರಿಯಸ್ಸಾಗಿ ಗಮನ ಹರಿಸದಿದ್ದರೆ ನಮ್ಮ ರೈತರಿಗೆ ಅನ್ಯಾಯವಾಗುತ್ತದೆ. ಈಗ ಮುಂದಿನ ತಿಂಗಳು ನಮಗೆ ಇಲ್ಲಿ ರಿಜಿಸ್ಟ್ರೇಷನ್ ಆಗುತ್ತಿರತಕ್ಕಂಥ ಕಾಲದಲ್ಲಿ registered growers ಯಾರಿರುತ್ತಾರೋ ಅವರಿಗೆ ಮಾತ್ರ ಲೈಸೆನ್ಸ್ ಕೊಡುತ್ತಾರೆ. Unregisteredನವರಿಗೆ

ಲೈಸೆನ್ಸ್ ಕೊಡುವುದಿಲ್ಲ. Registered growersಗೆ ಲಾಭವೇನೆಂದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ನಲ್ಲಿ ಕ್ರಾಪ್ ಲೋನ್ ಸಿಗುತ್ತದೆ, ಬೋರ್ಡ್‌ನಿಂದ ಗೊಬ್ಬರ ಕೊಡಿಸುವ ವ್ಯವಸ್ಥೆಯಾಗುತ್ತದೆ, ಆದರೆ unregistered growersಗೆ ಅಂತಹ ಯಾವ ಸೌಲಭ್ಯಗಳಿಲ್ಲ. ಇವತ್ತು ನಮ್ಮ ರೈತರು ಸುಮಾರು 59 ಸಹಸ್ರ ಬ್ಯಾರನ್‌ನಷ್ಟು ಹೊಗೆಸೊಪ್ಪನ್ನು ಬೆಳೆದು ಮಂಡಳಿಗೆ ಕೊಟ್ಟಿದ್ದಾರೆ. ರೈತರು ಒಂದು ಬ್ಯಾರನ್‌ಗೆ ಒಂದು ಲಕ್ಷ ರೂಪಾಯಿಗಳಷ್ಟು ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿದ್ದಾರೆ. ಅವರು ಬೇರೆ ಯಾವ ಯಾವ ಬ್ಯಾಂಕ್‌ನಿಂದಲೂ ಸಾಲ ಪಡೆದಿಲ್ಲ. ಇವತ್ತೇನಾದರೂ ನಾವು registered growersಗೆ ಲೈಸೆನ್ಸ್ ಅನ್ನೇ ಕೊಡಿಸದೇ ಹೋದರೆ ತೊಂದರೆಯಾಗುತ್ತದೆ. ನಮ್ಮ ರಾಜ್ಯದ ರೈತರು ಕನಿಷ್ಟ 80 ಮಿಲಿಯನ್ ಕೆ.ಜಿ.ಗಳಷ್ಟು ಹೊಗೆಸೊಪ್ಪನ್ನು ಬೆಳೆಯಲು ಅನುಮತಿ ಕೊಡಬೇಕೆಂದು ಮಂಡಳಿಯ ಮೇಲೆ ಸರ್ಕಾರದವರು ಒತ್ತಡ ತರಬೇಕು. ನಾವು ರೈತರ ಪರವಾಗಿ ಇರತಕ್ಕಂಥ ಸರ್ಕಾರವೆಂದು ಹೇಳುತ್ತಿರುವ ಕೇಂದ್ರ ಸರ್ಕಾರ ರಾಜ್ಯದ ರೈತರ ನೆರವಿಗೆ ಬರಲೇಬೇಕು. ಗುಂಟೂರಿನ ಎಂ.ಪಿ.ಯವರಾದ ರಾವ್ ಎಂಬುವವರು unregestered growers ಹೊಗೆಸೊಪ್ಪು ಬೆಳೆದಿರುವ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡಬೇಕು ಎಂದು ಹೇಳುತ್ತಿದ್ದಾರೆ. ಹೀಗಾದರೆ ಈ ರೈತರ ಸಮಸ್ಯೆಯತ್ತ ಗಮನ ಹರಿಸುವವರು ಯಾರ? ನಾವು ರೈತರ ಪರವಾಗಿ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಸಲ್ಲಿಸಿರುವಾಗಿ ಸಂದರ್ಭದಲ್ಲಿ ಗುಂಟೂರಿನ ಎಂಪಿಯವರು ಕರ್ನಾಟಕದ ರೈತರು ಬೆಳೆದಿರುವ ಹೊಗೆ ಸೊಪ್ಪಿನ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ,ಆಗಬೇಕು ಎಂದು ಹೇಳುವುದಕ್ಕೆ ಆಂಧ್ರದ ಆ ಎಂ.ಪಿ.ಗೆ ಏನು ಅಧಿಕಾರ ಇದೆ? ಅವರಿಗೂ ಇದಕ್ಕೂ ಸಂಬಂಧವಿಲ್ಲ. ನಮ್ಮ ರೈತರ ಪರವಾಗಿ ನ್ಯಾಯ ಕೇಳುವಂತಹ ಹಕ್ಕು ನಮಗೆ ಇದೆ. ಇವತ್ತು ಈ ಕೂಡಲೇ ಈ ಸದನ unanimous ಆಗಿ ಡಿಸಿಷನ್ ತೆಗೆದುಕೊಳ್ಳಬೇಕು, ಇವತ್ತು ನಮ್ಮ ರಾಜ್ಯದ unregistered growers ತಾಪತ್ರಯವನ್ನು ಅನುಭವಿಸುತ್ತಿರುವುದರಿಂದ ಅವರೆಲ್ಲರಿಗೂ ಲೈಸೆನ್ಸ್ ಸಿಗಬೇಕು. ಲೈಸೆನ್ಸ್ ಸಿಕ್ಕಿದಾಗ ಮಾತ್ರ ನಮ್ಮ ರೈತರಿಗೆ ಒಳ್ಳೆಯದಾಗುತ್ತದೆ. ಇವತ್ತು ರೇಷ್ಮೆ ಮಂಡಳಿ ಇದ್ದು, ಅದೇ ತರಹ ರಾಜ್ಯದಲ್ಲೂ ಕೂಡ ರೇಷ್ಮೆಗೆ ಒಬ್ಬ ಮಂತ್ರಿ ಇದ್ದಾರೆ. ನಾನು ಸರ್ಕಾರವನ್ನು ಒತ್ತಾಯ ಮಾಡುವುದು ಇಷ್ಟೇ. ಇವತ್ತು ನಮ್ಮ ಸರ್ಕಾರ ಈ ಹೊಗೆಸೊಪ್ಪ ಮಂಡಳಿಯನ್ನು ಬಿಟ್ಟು, ತಾವೇ ಏನಾದರೂ ಒಂದು ಪರ್ಯಾಯವಾದ ವ್ಯವಸ್ಥೆಯೊಂದನ್ನು ಮಾಡಿದಲ್ಲಿ ಇವತ್ತು ನಮ್ಮಲ್ಲಿ ಬೆಳೆಯತಕ್ಕ 80 ಸಹಸ್ರ ಮಿನಿಯನ್ ಹೊಗೆಸೊಪ್ಪನ್ನು ಮಾರಾಟ ಮಾಡಲು ಅನುಕೂಲವಾಗುತ್ತದೆ. ನಾವು ಬೆಳೆದ ಉತ್ತಮವಾದಂತಹ ಹೊಗೆಸೊಪ್ಪಿಗೆ ಒಳ್ಳೆಯ ಬೆಲೆ ಸಿಕ್ಕಿಲ್ಲವೆಂದು ಇಲ್ಲಿಯವರೆಗೆ ನಮ್ಮ ರೈತರ್ಯಾರು ಗಲಾಟೆ ಮಾಡಿಲ್ಲ. ಹೊಗೆಸೊಪ್ಪಿಗೆ ಕೆ.ಜಿ.ಗೆ 43 ರೂಪಾಯಿಗಳಷ್ಟು ಸರಾಸರಿ ಬೆಲೆ ದೊರೆತಿದ್ದು ನಿಜವಾಗಿಯೂ ಇದು ಒಳ್ಳೆಯ ಬೆಲೆಯಾಗಿದೆ. ಈ ಬರಗಾಲದಲ್ಲಿ ನಮ್ಮ ರಾಜ್ಯದ ರೈತರಿಗೆ ಬೆಳೆಯನ್ನು ಸಾಧ್ಯವಾಗಿರುವ ಬೆಳೆ ಹೊಗೆ ಸೊಪ್ಪು ಮಾತ್ರ. ಕರ್ನಾಟಕದಲ್ಲಿ ಇನ್ಯಾವ ಬೆಳೆಯನ್ನು ಬೆಳೆಯಲು ರೈತರಿಗೆ ಅನುಕೂಲವಾಗಿಲ್ಲ. ನಮ್ಮ ಭಾಗ ಸೆಮಿ ಮಲೆನಾಡು ಪ್ರದೇಶವಾಗಿರುವುದರಿಂದ ನಿಜವಾಗಿಯೂ ಉತ್ತಮವಾದಂತಹ ಹೊಗೆಸೊಪ್ಪು ಬಿಟ್ಟು ಬೇರೆ ಬೆಳೆಯನ್ನು ಬೆಳೆಯುವುದಕ್ಕೆ ನಮ್ಮಿಂದಾಗುತ್ತಿಲ್ಲ. ದಯಮಾಡಿ ಹೊಗೆಸೊಪ್ಪು ಬೆಳೆ ಬೆಳೆಯುವ ರೈತರಿಗೆ permanent registration ಕೊಡಿಸುವಂತಹ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಇವತ್ತು ಸದನ ಒಂದು ತೀರ್ಮಾನ ಕೈಗೊಳ್ಳಬೇಕು. ನಮ್ಮ ಕರ್ನಾಟಕದಲ್ಲಿ ಎಷ್ಟು ಪ್ರಮಾಣದಲ್ಲಿ

ಹೊಗೆಸೊಪ್ಪು ಬೆಳೆಯಬೇಕು ಎಂಬಂತಹ ತೀರ್ಮಾನವನ್ನು ಕರ್ನಾಟಕದಲ್ಲಿ ಮಾಡಬೇಕೇ ವಿನಃ ಆಂಧ್ರದಲ್ಲಿ ಅಥವಾ ದೆಹಲಿಯಲ್ಲಿ ಅಥವಾ ಮದ್ರಾಸ್‌ನಲ್ಲಿ ತೀರ್ಮಾನ ಮಾಡುವಂತಾಗಬಾರದು. ಈಗಾಗಲೇ ತಂಬಾಕು ಮಂಡಳಿಯವರು ದಿನಾಂಕ 5.4.2003ರಂದು 2003ನೇ ಇಸವಿಗೆ ಕ್ರಾಪ್ ಸೈಜ್ ಫಿಕ್ಸ್ ಮಾಡುವುದಕ್ಕೆ ಮದ್ರಾಸ್‌ನಲ್ಲಿ ಮೀಟಿಂಗ್ ಫಿಕ್ಸ್ ಮಾಡಿದ್ದಾರೆ. ನಮ್ಮ ಕ್ರಾಪ್ ಸೈಜ್ ಅನ್ನು ನಮ್ಮ ಕರ್ನಾಟಕದಲ್ಲೇ ತೀರ್ಮಾನ ಮಾಡಬೇಕೆಂದು ದಯವಿಟ್ಟು ಇವತ್ತು ಸದನ ತೀರ್ಮಾನ ಮಾಡಬೇಕು. ಆ ಸಭೆಯಲ್ಲಿ ನಮ್ಮ ಕೃಷಿ ಆಯುಕ್ತರು ಮತ್ತು ಕೃಷಿ ಸಚಿವರು ಇರುವಂತಾಗಬೇಕು. ಅಂತಹ ಸಭೆಯೊಂದರಲ್ಲಿ ಈ ರೀತಿ ತೀರ್ಮಾನ ಮಾಡಿದಾಗ ಮಾತ್ರ ನಮಗೆ ಅನುಕೂಲವಾಗುತ್ತದೆ. ಎಲ್ಲಾ ಶಾಸಕ ಪ್ರತಿನಿಧಿಗಳನ್ನು ಕರೆದು ಈ ಬಗ್ಗೆ ಚರ್ಚೆ ಮಾಡಬೇಕು. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದ ಎಂ.ಪಿ.ಗಳ ನಿಯೋಗವೊಂದು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಾಯಿಸಬೇಕು. ನಾನು ಇಷ್ಟು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವೈಸ್ ಛೇರ್ಮನ್ :- ಈಗ ಮಾನ್ಯ ಪಾಪಣ್ಣನವರು ಮಾತನಾಡಿ. ದಯವಿಟ್ಟು ಮಾನ್ಯ ಮಂಜುರವರು ಹೇಳಿದಂತಹ ಅಂಶಗಳನ್ನೇ ತಮ್ಮ ಭಾಷಣದಲ್ಲಿ ರಿಪೀಟ್ ಮಾಡಬೇಡಿ.

†ಶ್ರೀ ವಿ. ಪಾಪಣ್ಣ (ಹುಣಸೂರು) :- ಮಾನ್ಯ ಅಧ್ಯಕ್ಷರೇ, ಹಿಂದೆ ನಮ್ಮ ರಾಜ್ಯದ ಹೊಗೆಸೊಪ್ಪು ಬೆಳೆಗಾರರಿಗೆ ರಜೆಯನ್ನು ಘೋಷಣೆ ಮಾಡಿದಂತಹ ಸಮಯದಲ್ಲಿ ಆ ವಿಚಾರದ ಬಗ್ಗೆ ಇದೇ ಸದನದಲ್ಲಿ ನಾವು zero hourನಲ್ಲಿ ನಾವು ಪ್ರಶ್ನೆ ಮಾಡಿದ್ದೆವು. ಅದಕ್ಕೆ ಸರ್ಕಾರ ಸ್ಪಂದಿಸಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಜಿಲ್ಲಾ ಮಂತ್ರಿಗಳನ್ನೊಳಗೊಂಡ ನಿಯೋಗವೊಂದನ್ನು ದೆಹಲಿಗೆ ಒಯ್ದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿತ್ತು. ಕರ್ನಾಟಕದ ಹೊಗೆಸೊಪ್ಪು ಬೆಳೆಗಾರರಿಗೆ ರಜಾ ಘೋಷಣೆ ಮಾಡುವುದಕ್ಕೆ ಆಂಧ್ರದಲ್ಲಿ ತೀರ್ಮಾನ ತೆಗೆದುಕೊಳ್ಳುವಂಥಾದ್ದು ಸೂಕ್ತವಲ್ಲ, ಆ ರಜಾ ಘೋಷಣೆಯನ್ನು ರದ್ದು ಮಾಡಿ ಎಂದು ಅವರಲ್ಲಿ ನಾವು ಮನವಿ ಇಟ್ಟಾಗ ಅದಕ್ಕೆ ಪೂರಕವಾಗಿ 25 ಮಿಲಿಯನ್ ಹೊಗೆಸೊಪ್ಪನ್ನು ಮಾರಾಟ ಮಾಡಲಿಕ್ಕೆ ನಮಗೆ ಕೇಂದ್ರ ಸರ್ಕಾರದವರು ಅವಕಾಶ ಮಾಡಿಕೊಟ್ಟರು. ಸುಮಾರು 12-13 ಮಿಲಿಯನ್ ಹೆಚ್ಚಿಗೆ ಹೊಗೆಸೊಪ್ಪನ್ನೂ ಕೂಡ ಮಾರಾಟ ಮಾಡಲಿಕ್ಕೆ ಅನಂತರ ಅವಕಾಶ ಮಾಡಿಕೊಟ್ಟರು. ನಮ್ಮ ಕರ್ನಾಟಕ ರಾಜ್ಯದ ಹೊಗೆಸೊಪ್ಪು ಬೆಳೆ ಕೃಷಿಗೆ ಸಂಬಂಧಪಟ್ಟಿದ್ದು. ನಾವು ಎಷ್ಟು ಹೊಗೆಸೊಪ್ಪ ಬೆಳೆಯನ್ನು ಬೆಳೆಯಬೇಕು, ಎಷ್ಟು ಬೆಳೆಯಬಾರದು ಎಂದು ನಿಗದಿ ಪಡಿಸುವುದು ಆಂಧ್ರದವರಿಗೆ ಸಂಬಂಧಪಟ್ಟಿದ್ದಲ್ಲ. ಇಲ್ಲಿಯವರೆಗೆ ಈ ಬೆಳೆ ನಿಗದಿಯ ಸಭೆ ಬೆಂಗಳೂರಿನಲ್ಲಿ ನಡೆಯುತ್ತಿತ್ತು. ನಮಗೆ ಮೋಸ ಮಾಡುವಂತಹ ತಂತ್ರವಾಗಿ, ಕರ್ನಾಟಕದಲ್ಲಿ ರೈತರು ಎಷ್ಟು ಹೊಗೆಸೊಪ್ಪು ಬೆಳೆಯಬೇಕು ಎಂಬ ಬಗ್ಗೆ ತೀರ್ಮಾನಿಸಲು ಈ ವರ್ಷದ ಸಭೆಯನ್ನು ಚೆನ್ನೈನಲ್ಲಿ ಇಟ್ಟಿದ್ದಾರೆ. ನಮ್ಮ ಕರ್ನಾಟಕದ ರೈತರಿಗೆ ಇವರು ಎಷ್ಟು ಮೋಸ ಮಾಡುತ್ತಿದ್ದಾರೆಂದು ನೀವೇ ಲೆಕ್ಕ ಹಾಕಿಕೊಳ್ಳಿ. ಈ ದಿಸೆಯಲ್ಲಿ ಸಹಾಯ ಮಾಡಬೇಕೆಂದು ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲೂ ಸಹ ಮನವಿ ಮಾಡಿಕೊಳ್ಳುತ್ತೇನೆ. ರೈತರ ಪರವಾಗಿ ನಾವು ಹೋರಾಟ ಮಾಡುತ್ತೇವೆ. ನಾವು ರೈತರ ಪರವಾಗಿ ಇದ್ದೇವೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆ. ಆದರೆ ಕೇಂದ್ರ ಸರ್ಕಾರ ನಮಗೆ ಸಹಾಯ ಮಾಡುವ ಮಟ್ಟದಲ್ಲಿದ್ದರೂ

ಕೂಡ, ತಮ್ಮ ಸರ್ಕಾರಕ್ಕೆ ಆಂಧ್ರದ ಮಾನ್ಯ ಚಂದ್ರಬಾಬು ನಾಯ್ಡು ಅವರ ಪಕ್ಷದ ಲೋಕಸಭಾ ಸದಸ್ಯರು ನೀಡುತ್ತಿರುವ ಬೆಂಬಲವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಕಾರಣದಿಂದಾಗಿ ಇವತ್ತು ನಮ್ಮ ರಾಜ್ಯದ ರೈತರ ಹಿತಕ್ಕೆ ಧಕ್ಕೆಯಾಗುವಂತಹ ಆದೇಶವನ್ನು ಇವತ್ತು ಕೇಂದ್ರ ಸರ್ಕಾರ ನೀಡುತ್ತಿದೆ. ದಯಮಾಡಿ ಇವತ್ತು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ರೈತರು ಹಿತಕ್ಕೆ ಧಕ್ಕೆ ತರುವಂಥಾದ್ದನ್ನು ತಪ್ಪಿಸಲು ತಕ್ಷಣದಲ್ಲಿ ಕಾರ್ಯಪ್ರವೃತ್ತರಾಗಿ, ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವಂತಹ ಮನವಿಯನ್ನು ಮಾಡುತ್ತೇನೆ. ಇವತ್ತು ಕರ್ನಾಟಕದ ಹೈಕೋರ್ಟ್‌ನಲ್ಲಿ ನಾನು ಒಂದು ಪಬ್ಲಿಕ್ ಲಿಟಿಗೇಷನ್ ಹಾಕಿ ಒಂದು ಪರ್ಸೆಂಟ್ ಮಾರಾಟ ಮಾಡುವುದಕ್ಕೆ ಹೈಕೋರ್ಟಿನಿಂದ ಆದೇಶ ಪಡೆದಿದ್ದೆವು. ಆದರೆ ಕೇಂದ್ರದ Solicitor General ರವರು ಇಲ್ಲಿಗೆ ಬಂದು ರೈತರ ವಿರುದ್ಧವಾದ ಮಾಡಿದರು. ರೈತರಿಗೆ ನ್ಯಾಯಾಲಯದ ತೀರ್ಪಿನಿಂದ ಅನುಕೂಲವಾಗಿದೆ, ದಯಮಾಡಿ ಆ ಕೇಸಿಗೆ ನೀವು ಏನೂ ಅಡ್ಡಿ ಪಡಿಸಬೇಡಿ ಎಂದು ಹೇಳಿದರೂ ಕೂಡ ಅವರು ಬಂದು ನಮ್ಮ ವಿರುದ್ಧವಾದ ಮಾಡಿದ ಮೇಲೆ ಕಳೆದ ವರ್ಷ 20 ಕೋಟಿ ರೂಪಾಯಿಗಳ ದಂಡವನ್ನು ತಂಬಾಕು ಮಂಡಳಿ ನಮ್ಮ ರಾಜ್ಯದ ರೈತರಿಗೆ ಹಾಕಿದೆ.

5.40 ಪಿ.ಎಂ.

ದಂಡವನ್ನು ಹಾಕಲೇಬೇಕೆಂದು ಹೇಳಿದಾಗ, ಕೋರ್ಟ್‌ನಲ್ಲಿ ಹೊಗೆಸೊಪ್ಪು ಬೆಳೆಯುವುದು ಸಂವಿಧಾನ ಬಾಹಿರವೇ ಎಂದು ಕೇಳಿದಾಗ ಅಲ್ಲ ಎಂದು ಹೇಳಿದ ಮೇಲೆ ನಾವು ಎಷ್ಟೇ ಹೊಗೇಸೊಪ್ಪನ್ನು ಬೆಳೆಯಲು ಸ್ವತಂತ್ರರು. ನಾವು ಎಷ್ಟಾದರೂ ಹೊಗೆಸೊಪ್ಪನ್ನು ಬೆಳೆಯುತ್ತೇವೆ. ಟ್ರೇಡರ್ಸ್‌ನವರು ತೆಗೆದುಕೊಳ್ಳುವುದಾದರೆ ನಾವು ಮಾರುತ್ತೇವೆ, ತೆಗೆದುಕೊಳ್ಳದಿದ್ದರೆ ನಿಲ್ಲಿಸುತ್ತೇವೆ. ಬೆಲೆ ನಿಗದಿ ಮಾಡುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಲು ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಸಚಿವರಾದ ಜಯಚಂದ್ರರವರು ನಾವುಗಳು ಸರ್ಕಾರದ ಪರವಾಗಿ ಒಂದು ಡೆಲಿಗೇಷನ್ ಹೋಗಿದ್ದೆವು. ಅದರಿಂದ ನಮ್ಮ ಕರ್ನಾಟಕದ ರೈತರಿಗೆ ಅನುಕೂಲವಾಗಿದೆ. ಕಳೆದ ಎರಡು ವರ್ಷದಿಂದ ಸರ್ಕಾರ ರೈತರಪರವಾಗಿದೆಯೆಂದು ಅವರು ಹೇಳಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಸಲವೂ ಆ ರೀತಿ ಡೆಲಿಗೇಷನ್ ಮಾನ್ಯ ಪ್ರಧಾನಮಂತ್ರಿಯವರ ಬಳಿಗೆ ಹೋಗಬೇಕು, ಮಾನ್ಯ ವಿರೋಧ ಪಕ್ಷದ ನಾಯಕರು ಅದಕ್ಕೆ ಸಹಕರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) :- ಮಾನ್ಯ ಅಧ್ಯಕ್ಷರೆ, ವರ್ಜಿನಿಯಾ ಹೊಗೆಸೊಪ್ಪನ್ನು ಕರ್ನಾಟಕದಲ್ಲಿ 1967ನೇ ಇಸವಿಯಿಂದ ಬೆಳೆಯುತ್ತಿದ್ದೇವೆ. 1984ರಲ್ಲಿ ಸುಮಾರು 13 ಸಾವಿರ ಜನರ ರೈತರು ಸುಮಾರು 13 ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ಬೆಳೆಯುತ್ತಿದ್ದರು. ಆದರೆ ಇವತ್ತು ಸುಮಾರು 50 ಸಾವಿರ ರೈತರು ಸುಮಾರು 70 ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ಬೆಳೆಯತಕ್ಕ ಹಂತಕ್ಕೆ ಬಂದಿದ್ದೇವೆ. 1984ರಲ್ಲಿ ಹೊಗೆಸೊಪ್ಪು ಮಂಡಳಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಕರ್ನಾಟಕ ರಾಜ್ಯದ ರೈತರ ರಕ್ತವನ್ನು ಒಂದಲ್ಲ ಒಂದು ರೀತಿಯಲ್ಲಿ ಸತತವಾಗಿ ಹೀರಿದೆ. ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡಲು ಕೇಂದ್ರ ಸರ್ಕಾರ ಈ ಮಂಡಳಿಯನ್ನು ಸ್ಥಾಪನೆ ಮಾಡಿತು. ಆದರೆ ಈ ಹೊಗೆಸೊಪ್ಪು ಮಂಡಳಿಯು ಹೊಗೆಸೊಪ್ಪು ಕೊಂಡುಕೊಳ್ಳುವ ಟ್ರೇಡರ್ಸ್‌ಗಳು ಯಾರಿದ್ದಾರೆ ಅವರ ಕೈಗೊಂಬೆಯಾಗಿ ಅವರ ತಾಳಕ್ಕೆ ತಕ್ಕಂತೆ ನಡೆದು ರೈತರನ್ನು

ಹಂತ ಹಂತವಾಗಿ ಶೋಷಣೆ ಮಾಡಿಕೊಂಡು ಬಂದಿದೆ. ಹೊಗೆಸೊಪ್ಪು ಮಂಡಳಿಯವರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ, 2002-2003ನೇ ಇಸವಿಯಲ್ಲಿ ಬೆಳೆ ನಿಗದಿ ಪಡಿಸತಕ್ಕದ್ದು, 8ನೇ ಫೆಬ್ರವರಿಯಲ್ಲಿ ಸಭೆ ಸೇರಿ 30 ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ಬೆಳೆಯಬೇಕೆಂದು ನಿಗದಿಪಡಿಸಿತು. ಬೆಳೆ ನಿಗದಿಪಡಿಸಲು ಒಂದು ಸಮಿತಿ ಇದೆ, ಅದರಲ್ಲಿ 8 ಜನ ಸದಸ್ಯರುಗಳಿದ್ದು ಅದರಲ್ಲೆ ಕೇವಲ ಒಬ್ಬರು ಮಾತ್ರ ಕರ್ನಾಟಕದವರು, ಉಳಿದವರು ಆಂಧ್ರದವರು ಮತ್ತು ಅಧಿಕಾರಿಗಳು. ಆ ಸಮಿತಿಯು ಈ ಬೆಳೆಯನ್ನು ನಿಗದಿ ಮಾಡಿತು. ಇವರು ಟ್ರೇಡರ್ಸ್‌ಗಳೇನಿದ್ದಾರೆ ಅವರಿಗೆ ಈ ವರ್ಷ ಕರ್ನಾಟಕದಲ್ಲಿ ಎಷ್ಟು ಬೆಳೆಯಬಹುದು, ಎಷ್ಟು ಮಾರುಕಟ್ಟೆ ಇದೆ ಎಂದು ಕೇಳುತ್ತಾರೆ. ಆ ಟ್ರೇಡರ್ಸ್ ನಮ್ಮಲ್ಲಿ 60 ಮಿಲಿಯನ್ ಕೆ.ಜಿ. ಬೆಳೆಯುತ್ತಿದ್ದರೂ ನಮಗೆ 30 ಮಿಲಿಯನ್ ಕೆ.ಜಿ. ಬೇಡಿಕೆ ಇದೆಯೆಂದು ಕೊಟ್ಟರು. ಫೆಬ್ರವರಿ ತಿಂಗಳ ಪ್ರಾರಂಭದಲ್ಲಿ 31 ಮಿಲಿಯನ್ ಕೆ.ಜಿ. ಬೆಳೆಯಬೇಕೆಂದು ನಿರ್ಧಾರ ಮಾಡಿತು. ಮಾರ್ಚ್ ತಿಂಗಳಲ್ಲಿ 42 ಮಿಲಿಯನ್ ಕೆ.ಜಿ.ಗೆ ಏರಿಸಿತು. ಕೇವಲ ಒಂದು ತಿಂಗಳಿನಲ್ಲಿ ಆ ರೀತಿ ನಿಗದಿ ಮಾಡಿತು. ಅನಂತರ ಆಗಸ್ಟ್‌ನಲ್ಲಿ 55 ಮಿಲಿಯನ್ ಕೆ.ಜಿ. ಬೆಳೆಯಿರಿ ಎಂದು ಹೇಳಿತು. ಅಕ್ಟೋಬರ್‌ನಲ್ಲಿ 58 ಮಿಲಿಯನ್ ಕೆ.ಜಿ. ಬೆಳೆಯಿರಿ ಎಂದಿತು. ಆದರೆ ನಮ್ಮ ರಾಜ್ಯದಲ್ಲಿ 68 ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ಬೆಳೆದಿದ್ದಾರೆ. ಬೆಳೆದಂಥ ಎಲ್ಲಾ ಹೊಗೆಸೊಪ್ಪು ಫಾರಿನ್‌ಗೆ ಎಕ್ಸ್‌ಪೋರ್ಟ್ ಆಗಿದೆ. ಹೀಗಿರುವಾಗ ಈ ಮಂಡಳಿಯವರ ಔಚಿತ್ಯವೇನು? ಮುಂದಿನ ವರ್ಷ 100 ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ಬೆಳೆಯುವ ಅವಕಾಶ ನಮಗಿದೆ. ಅಂಥ ಬರಗಾಲದಲ್ಲೇ ನಾವು 70 ಮಿಲಿಯನ್ ಕೆ.ಜಿ. ಬೆಳೆದಿರುವಾಗ ಮಳೆಗಾಲ ಚೆನ್ನಾಗಿ ಆದರೆ 100 ಮಿಲಿಯನ್ ಕೆ.ಜಿ. ಬೆಳೆಯುತ್ತೇವೆ. ಆ ರೀತಿ ಸುಮಾರು ಮಿಲಿಯನ್ ಕೆ.ಜಿ. ಬೆಳೆಯಬೇಕಾದರೆ ನಮ್ಮ ರೈತರ ಬೆನ್ನುತಟ್ಟಿ ಅವರ ಆರ್ಥಿಕ ಸ್ಥಿತಿ ಅನುಕೂಲವಾಗಲಿ ಎಂದು ಮಾಡಬೇಕೋ ಅಥವಾ ನಮಗೆ 40 ಮಿಲಿಯನ್ ಕೆ.ಜಿ. ಮಾತ್ರ ಬೆಳೆಯಿರಿ ಎಂದು ಹೇಳಬೇಕೋ? ಅವರು ಯಾರು ನಮಗೆ ಇಂತಿಷ್ಟೇ ಬೆಳೆಯಿರಿ ಎಂದು ಹೇಳಲು ಅವರಿಗೆ ನಮ್ಮ ರಾಜ್ಯ ಸರ್ಕಾರದ ಮೇಲೆ ಯಾವುದೇ ಅಧಿಕಾರವಿಲ್ಲ. ಈ ವ್ಯವಸಾಯ ಇಲಾಖೆ ರಾಜ್ಯ ಸರ್ಕಾರದ ಸ್ವತ್ತು. ರಾಜ್ಯ ಸರ್ಕಾರದ ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಳೆದ ವರ್ಷ ಬೆಳೆ ಸಮಿತಿಯು ಬೆಂಗಳೂರಿನಲ್ಲಿ ಕುಳಿತುಕೊಂಡು ಬೆಲೆಯ ತೀರ್ಮಾನ ಮಾಡಿತು. ಈ ವರ್ಷ ಆ ಸಭೆಯನ್ನು ಆಂಧ್ರದ ಹೈದ್ರಾಬಾದ್‌ನಲ್ಲಿ ಮಾಡಬೇಕೆಂದಾಗ, ಮಾನ್ಯ ಕೃಷಿ ಸಚಿವರು ಜಯಚಂದ್ರರವರು ಮತ್ತು ಎಲ್ಲರೂ ಸಭೆಯನ್ನು ಕರೆದು ಇದು ಆಗುವುದಿಲ್ಲ, ಸಭೆಯನ್ನು ಕರ್ನಾಟಕದಲ್ಲೇ ಕರೆಯಬೇಕು, ಇಲ್ಲೇ ತೀರ್ಮಾನ ಮಾಡಬೇಕೆಂದು ಹೇಳಿ, ಆಂಧ್ರದಲ್ಲಿ ಮಾಡುವುದಾದರೆ ನಾವು ಭಾಗವಹಿಸುವುದಿಲ್ಲವೆಂದು ಹೇಳಿದಾಗ ಅದನ್ನು ಮುಂದೂಡಿದ್ದಾರೆ. ಮುಂದಿನ ತಿಂಗಳ 5ನೇ ತಾರೀಖು ಚೆನ್ನೈನಲ್ಲಿ ಸಭೆ ಸೇರಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ. ದಯಮಾಡಿ ಆಂಧ್ರದಲ್ಲಾಗಲಿ, ಚೆನ್ನೈನಲ್ಲಾಗಲಿ ಸಭೆಯಾದರೆ ನಮ್ಮ ಸರ್ಕಾರ ಅದರಲ್ಲಿ ಭಾಗವಹಿಸುವುದು ಬೇಕಾಗಿಲ್ಲ, ನಮ್ಮ ಸರ್ಕಾರ ನಮ್ಮ ಕರ್ನಾಟಕದಲ್ಲಿ ಎಷ್ಟು ಬೆಳೆಯಬೇಕು ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರ ದೃಢವಾದ ನಿಲುವನ್ನು ತೆಗೆದುಕೊಳ್ಳಬೇಕು. ಕಳೆದ ಮೂರು ವರ್ಷಗಳಿಂದ, ಮಾನ್ಯ ಕೃಷ್ಣರವರು ಮುಖ್ಯ ಮಂತ್ರಿಯಾದಾಗಿನಿಂದ ಹೊಗೆಸೊಪ್ಪು ಬೆಳೆಗಾರರ ಹಿತವನ್ನು ಬಹಳ ಚೆನ್ನಾಗಿ ಕಾಯ್ದುಕೊಂಡು

ಬಂದಿದ್ದಾರೆ. 2000ನೇ ಇಸವಿಯಲ್ಲಿ ಬೆಳೆಗೆ ರಜೆ ಕೊಡಬೇಕೆಂದು ಹೇಳಿದಾಗ, ಇದೇ ಸಮಿತಿಯಲ್ಲಿ ಪ್ರಸ್ತಾಪ ಮಾಡಿದಾಗ, ಇಡೀ ಸರ್ಕಾರವೇ ನಮ್ಮ ಜೊತೆ ಬಂದು ದೆಹಲಿಯವರೆಗೆ ಹೋಗಿ ಬೆಳೆ ಬೆಳೆಯಲು ರಜೆ ಇದ್ದುದ್ದನ್ನು ರದ್ದು ಪಡಿಸಲಾಯಿತು. ಕಳೆದ ವರ್ಷ ನಮಗೆ 65 ಮಿಲಿಯನ್ ಕೆ.ಜಿ. ಬೇಕೆಂದು ಕೇಳಿದಾಗ ಮಂಡಳಿಯವರು 45 ಮಿಲಿಯನ್ ಮಾತ್ರ ಬೆಳೆಯಬೇಕೆಂದು ಹೇಳಿದಾಗಲೂ ಸರ್ಕಾರ ರೈತರ ಹಿತವನ್ನು ಕಾಪಾಡಿದೆ. ಬೆಳೆ ಬೆಳೆಯಲು ನಿಗದಿ ಮಾಡುವ ಸಮಿತಿಯೇನಿದೆ ಅದರ ಅವಧಿ ಮುಗಿದುಹೋಗಿದೆ. ಆ ರೀತಿ ಅವಧಿ ಮುಗಿದುಹೋಗಿರುವ ಸಮಿತಿಯ ಸಭೆಯನ್ನು ಮುಂದಿನ ತಿಂಗಳ 5 ರಂದು ಚೆನ್ನೈನಲ್ಲಿ ಮಾಡುತ್ತಿದ್ದಾರೆ. ಅದರಲ್ಲಿ ಸರ್ಕಾರ ಭಾಗವಹಿಸಬಾರದು. ಆ ಸಭೆಯನ್ನು ಕರ್ನಾಟಕದಲ್ಲೇ ಕರೆಯಲು ಸರ್ಕಾರ ವ್ಯವಸ್ಥೆ ಮಾಡಿ ಕೊಡಬೇಕು. ಈ ರೈತರ ಹಿತವನ್ನು ಕಾಪಾಡಲು ಸರ್ಕಾರ ಬಹಳ ಮುಂದೆ ಬಂದಿದೆ. ಮತ್ತು ರಿಜಿಸ್ಟರ್ಡ್ ಮತ್ತು ಅನ್ ರಿಜಿಸ್ಟರ್ಡ್ ಎಂದೇನಿದೆ ಅದನ್ನು ವಜಾ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಬಹಳ ಗುರುತರವಾದ ಸಮಸ್ಯೆಯನ್ನು ರೈತರು ಎದುರಿಸುತ್ತಿದ್ದಾರೆ.

†ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :- ಮಾನ್ಯ ಅಧ್ಯಕ್ಷರೇ, ವರ್ಜನಿಯಾ ತಂಬಾಕು ಏನಿದೆ ಅದಕ್ಕೆ ಹೊರ ದೇಶಗಳಲ್ಲಿ ಬಹಳ ಬೇಡಿಕೆ ಇದೆ. ಉತ್ತಮವಾದ ತಂಬಾಕನ್ನು ರಫ್ತು ಮಾಡುವ ಪರಿಸ್ಥಿತಿ ನಮ್ಮಲ್ಲಿದ್ದು ರೈತರಿಗೆ ಉತ್ತಮವಾದ ಬೆಲೆ ಸಿಗಬೇಕೆಂದು ಕಳೆದ ಸಲದ ಸಭೆಯಲ್ಲಿ ನಾನು ತಂಬಾಕು ಮಂಡಳಿಯವರಿಗೆ ಮನವೊಲಿಸಿ 43 ಮಿಲಿಯನ್ ಕೆ.ಜಿ. ಇದ್ದದನ್ನು 67 ಮಿಲಿಯನ್ ಕೆ.ಜಿ. ತಂಬಾಕನ್ನು ಕಳುಹಿಸಿಕೊಟ್ಟೆವು. ಇದರ ಬಗ್ಗೆ ವ್ಯಾಪಾರಸ್ಥರೊಂದಿಗೆ ನಾನು ಮಾತನಾಡಿದ್ದೇನೆ. ಅವರಿಗೆ ಇದನ್ನು ತೆಗೆದುಕೊಳ್ಳಬೇಕೆಂದು ಆಸಕ್ತಿ ಕೂಡ ಇದೆ. ಆದರೆ ಈ ತಂಬಾಕು ಮಂಡಳಿಯೇನಿದೆ ಇದು ಆಂಧ್ರ ಪ್ರದೇಶದ ಜನರ ಕಪಿಮುಷ್ಟಿಯಲ್ಲಿ ಸಂಪೂರ್ಣವಾಗಿ ಕುಳಿತುಬಿಟ್ಟಿದೆ. ಅವರು ಏನು ಮಾಡುತ್ತಾರೆಂದರೆ, ಕರ್ನಾಟಕದಿಂದ ಇಷ್ಟೊಂದು ತಂಬಾಕು ಹೋಗಬಾರದು ನಮ್ಮ ತಂಬಾಕು ಮಾರಾಟ ಕಡಿಮೆಯಾಗುತ್ತದೆ ಎಂಬ ದೃಷ್ಟಿಯಿಂದ ನಮ್ಮ ಮೇಲೆ ಅವರು ಹಿಡಿತ ಸಾಧಿಸಲು ಪ್ರಯತ್ನ ಮಾಡುತ್ತಿದ್ದಾರೆ. ಎಷ್ಟು ತಂಬಾಕನ್ನು ಬೆಳೆಯಬೇಕು ಎಂಬ ಬಗ್ಗೆ ನಿಗದಿ ಮಾಡಲು ಬೆಂಗಳೂರಿನಲ್ಲಿ ಸಭೆ ಸೇರಿ ನಿರ್ಣಯ ತೆಗೆದುಕೊಳ್ಳಬೇಕು. ಆದರೆ ಅವರು ಅದನ್ನು ಮಾಡುತ್ತಿಲ್ಲ. ಈಗ ಸಭೆಯನ್ನು ಗುಂಟೂರಿನಲ್ಲಿಟ್ಟರು, ಅನಂತರ ಅದನ್ನು ತೆಗೆದು ಚೆನ್ನೈನಲ್ಲಿ ಇಟ್ಟರು, ಇದಕ್ಕೆ ನಾವು ಸರ್ವತಾ ಒಪ್ಪುವುದಿಲ್ಲವೆಂಬ ಸ್ಪಷ್ಟನಿಲುವನ್ನು ನಾನು ಹೇಳಬಯಸುತ್ತೇನೆ. ಆ ದಿಸೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾರತದ ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ಸರ್ಕಾರದ ವಾಣಿಜ್ಯ ಸಚಿವರಿಗೆ ನ್ಯಾಯ ದೊರಕಿಸುವಂತೆ ಮನವಿಯನ್ನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಕಳುಹಿಸಿದ್ದಾರೆ. ಈ ಹಿನ್ನಲೆಯಲ್ಲಿ ಇನ್ನು ಹೆಚ್ಚು ಹೋರಾಟ ಮಾಡಬೇಕು. ನಮ್ಮ ರೈತರ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು ಮತ್ತು ರಿಜಿಸ್ಟರ್ಡ್ ಅನ್ ರಿಜಿಸ್ಟರ್ಡ್‌ನಲ್ಲಿ ಭೇದ ಭಾವ ಆಗಬಾರದು, ಎಲ್ಲರಿಗೂ ಸಮಾನವಾದ ಬೆಲೆ ಸಿಗಬೇಕೆನ್ನುವುದರಲ್ಲಿ ಸರ್ಕಾರ ಕೇಂದ್ರ ಸರ್ಕಾರಕ್ಕೆ ಇನ್ನು ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗಿ ಮನವೊಲಿಸುತ್ತೇವೆ. ಮತ್ತು ಇನ್ನು ಹೆಚ್ಚು ಆದರೆ ಸುಪ್ರೀಂ ಕೋರ್ಟ್‌ಗೆ ಹೋಗಿ ಈ ವಿಷಯವನ್ನು ನಾನು ಪರಶೀಲನೆ ಮಾಡುತ್ತೇನೆ.

(2) ವಿಷಯ: ಆಲೂರು ತಾಲ್ಲೂಕಿನಲ್ಲಿ ಆನೆಗಳ ಹಾವಳಿ

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಆಲೂರು ತಾಲ್ಲೂಕಿನಲ್ಲಿ ಈ ಆನೆಗಳ ಹಾವಳಿ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.